ಶ್ರೀಮತಿ ನಾಗಮ್ಮ ಕೇಶವಮೂರ್ತಿ :—ಅಲ್ಲಿ ಇಲ್ಲಿಯವರೆಗೂ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡಿರುವುದರಿಂದ ಅಲ್ಲಿ ರೆಸಿಡೆನ್ಷಿಯಲ್ ಪ್ರದೇಶದಲ್ಲೆಲ್ಲಾ ಈ ಗೃಹಕೈಗಾರಿಕೆಗಳು ಮಷ್ರೂಂ ಆಗಿರುವುದಕ್ಕೆ ಪ್ರಾರಂಭವಾಗಿದೆ. ಅದನ್ನು ತಡೆಗಟ್ಟಲು ಈಗ ಜಾಗ ಸಿಕ್ಕಿರುವುದರಿಂದ ಈ ವರ್ಷವೇ ಸರ್ಕಾರ ಅಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆಯೇ ?

ಶ್ರೀ ವಿ. ಎಸ್ ಕೌಜಲಗಿ :—ಸರ್ಕಾರದವರಿಗೆ ಈ ವಿಷಯಗಳೆಲ್ಲಾ ಅರಿವಾಗಿದೆ. ಆದಷ್ಟು ಬೇಗ ಅಲ್ಲಿ ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಅಧ್ಯಕ್ಷರು :—ಈಗ ಪ್ರಶ್ನೋತ್ತರಗಳು ಮುಗಿದವು

CALLING ATTENTION TO A MATTER OF URGENT PUBLIC IMPORTANCE

Re : alleged excess ryots in Hanagal Taluk

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ) : ಹಾನಗಲ್ಲು ತಾಲ್ಲೂಕಿನಲ್ಲಿ ಅಧಿಕಾರಿಗಳು ರೈತರ ಮೇಲೆ ಲೆವಿ ಪ್ರಕರಣದ ಬಗ್ಗೆ ನಡೆಸಿರತಕ್ಕ ದಾಳಿಯ ಕುರಿತೆಗೆ ಮಾನ್ಯ ಆಹಾರ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಚಿಸುತ್ತೇನೆ.

SRI K. H. PATIL :—(Minister for food and forest) Sir, I state as follows :

Under the provisions of the Essential Commodities Act, The Deputy Commissioner is the authority vested with powers of confiscation of food grains seized by the competent authorities and produced before him. Such seizures are done in pursuance of the several orders made under Section 3 of the Essential commodities Act. If the Deputy Commissioner is satisfied that there has been contravention of any such order he may order confiscation of the seized commodity. The law also provides that no foodgrains or edible oil seeds seized from the producer, shall be confiscated if the

seized foodgrains or edible oil seeds have been produced by him.

After the recent raids on the mills, a number of petitions were received contending that the paddy belonged to the petitioners who claimed to be growers. It was found that some of the petitions were in the names of non-existent persons. Hence a full investigation of the matter was ordered. The Deputy Commissioner has issued Show Cause Notices to the persons concerned and the cases will be coming up before him in the first week of March. As the matter is under consideration by virtue of the provisions of the Essential Commodities Act, it will not be appropriate and fair to discuss the details here.

As regards collection of levy, it may be of interest to note that out of the levy demand of 88,823 quintals of paddy for Hangal taluk only about 32,000 quintals have so far been paid by the growers. Under the Levy Order an opportunity is available to the grower to submit his representation when he considers the quantum of levy to be excessive or is not in a position to pay. One of the factors to determine the levy is the actual production of paddy in the holdings of the grower. The authorities have been advised to take into consideration such representations and pass suitable orders according to rules. Hence there is no need to apprehend that the agriculturists will be harassed. Even with regard to issue of clearance certificates the authorities have been directed to issue the Certificates without unreasonable delay.

ಶ್ರೀ ಹೆಚ್. ಡಿ. ದೇವೇಗೌಡ:—ಹೆಚ್ಚಿಗೆ ವಿವರಗಳನ್ನು ಕೇಳುವುದಕ್ಕೆ ಕಾಲಿಂಗ್ ಅಟೆನ್‌ಷನ್ ಮೋಷನ್ನಿನಲ್ಲಿ ಅವಕಾಶವಿಲ್ಲವೆಂದೇ ನಾನು ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನೇ ಕಳುಹಿಸಿದ್ದೆ. ಆದರೆ ಮಾನ್ಯ ಅಧ್ಯಕ್ಷರು ಅದನ್ನು ಹೀಗೆ ಪರಿವರ್ತಿಸಿದ್ದಾರೆ ಈ ಸಂದರ್ಭದಲ್ಲಿ ನನಗೆ ಮಾನ್ಯ ಸಚಿವರಿಂದ ಬೇಕಾದ ವಿವರ ಏನೆಂದರೆ—ಜಿಲ್ಲಾಧಿಕಾರಿಗಳು ಎಸೆನ್‌ಷಿಯಲ್ ಫುಡ್ ಕಮ್ಯಾಡಿಟೀಸ್ ಆಜ್ಞೆಯ ಪ್ರಕಾರ ಅದನ್ನು ಚಲಾಯಿಸದೆ ಅದರಲ್ಲಿ ತಪ್ಪಿತಸ್ಥರಾಗಿದ್ದರೆ ಅವರಿಗೂ ಶಿಕ್ಷೆಯನ್ನು ವಿಧಿಸುವುದಕ್ಕೆ ಅವಕಾಶವಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ :—ಯಾವಾಗ ವ್ಯವಸಾಯಗಾರನ ಮೇಲೆ ಕ್ರಮ ಕೈಗೊಳ್ಳಲಿಕ್ಕೆ ಅವಕಾಶವಿದೆಯೋ ಅದೇ ರೀತಿ ಅಧಿಕಾರಿಗಳು ತಪ್ಪಿದ್ದರೆ ಅವರ ಮೇಲೂ ಕ್ರಮ ಕೈಗೊಳ್ಳಲಿಕ್ಕೆ ಅವಕಾಶವಿದ್ದೇ ಇದೆ.

ಶ್ರೀ ಹೆಚ್. ಡಿ. ದೇವೇಗೌಡ :— ಈಗ ಏನು ಆ ಹಾನಗಲ್ಲು ತಾಲ್ಲೂಕಿನಲ್ಲಿ ರೈತರಿಂದ 28 ಸಾವಿರ ಕ್ವಿಂಟಾಲು ಭತ್ತವನ್ನು ಸರ್ಕಾರದವರು ಸೀಜ್‌ಮಾಡಿದ್ದಾರೆ, ಆ ಬತ್ತವನ್ನು ಯಾರಿಂದ ಸೀಜ್ ಮಾಡಲಾಗಿದೆಯೋ ಅವರು ಸರ್ಕಾರಕ್ಕೆ ಕಾನೂನು ಪ್ರಕಾರ ಅವರಿಗೆ ಕೊಟ್ಟಿದ್ದ ನೋಟೀಸ್ ಪ್ರಕಾರ ಸರ್ಕಾರಕ್ಕೆ ಕೊಡಬೇಕಾದ ಲೆವಿ ಬತ್ತವನ್ನು ಕೊಟ್ಟನಂತರ ಅವರಲ್ಲಿ ಅವರ ಸ್ವಂತ ಉಪಯೋಗಕ್ಕಾಗಿ ಉಳಿದಿತ್ತೋ ಅಂಥ ಭತ್ತವನ್ನು ಅವರು ಮಿಲ್‌ಮಾಡಿಸಲು ತೆಗೆದುಕೊಂಡು ಹೋಗಿದ್ದಾಗ ಅದನ್ನು ಅಕ್ರಮವಾಗಿ ವಿನಾಕಾರಣ ಸೀಜ್ ಮಾಡಿದ್ದಾರೆಂಬುದು ಸತ್ಯವಾದರೆ ಆ ಜಿಲ್ಲಾಧಿಕಾರಿಗಳ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಂಥ ಅಭಿಪ್ರಾಯವನ್ನೇ, ನನಗೆ ಒಬ್ಬ ವಿಧಾನ ಪರಿಷತ್ತಿನ ಸದಸ್ಯರು 300 ಅರ್ಜಿಗಳನ್ನು ತಂದು ಕೊಟ್ಟ ಕಾಲಕ್ಕೆ ಹೊಂದಿದ್ದು ಆವುಗಳನ್ನು 7 ದಿವಸಗಳಲ್ಲಿ ತನಿಖೆ ಮಾಡಿ ನಿಕಾಲೆ ಕೊಡಬೇಕು ಎಂದು ಬರೆದೆ. ಪೋಲೀಸ್ ಇನ್‌ವೆಸ್ಟಿಗೇಷನ್ ಆದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಅಭಿಪ್ರಾಯವನ್ನು ಹೊಂದಿದ್ದಾರೆಯೋ ಆದು ತಪ್ಪು, ರೈತರ ಹೆಸರಿನಿಂದ ಮಿಲ್‌ನವರು ಮಾಡಿರುವ ಖೊಟ್ಟಿ ದಾಖಲೆಯಾಗಿದೆ, ಕೆಲವು ಹೆಸರುಗಳು ಇಲ್ಲದವರದು ಸೇರಿವೆ, ಎಸ್‌ನಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಸಾಕಷ್ಟು ಅಪರಾಧಗಳು ಇದರಲ್ಲಿ ನಡೆದಿವೆ ಎಂದು ತಿಳಿದು ಬಂದರೂ ನನಗೆ ಸಮಾಧಾನವಾಗದೆ ಹೊಣೆಗಾರ ವ್ಯಕ್ತಿಗಳು ನನಗೆ ಅರ್ಜಿಗಳನ್ನು ಕೊಟ್ಟರು ಆದರ ಬಗ್ಗೆ ಇನ್ನೂ ಒಮ್ಮೆ ತನಿಖೆ ಮಾಡಬೇಕೆಂದು 7 ದಿವಸಗಳಲ್ಲಿ ತನಿಖೆ ಮುಗಿಯಬೇಕೆಂದು ಆರ್ಡರ್ ಮಾಡಿದ್ದರೂ ಸಹ ಬೆಂಗಳೂರಿನಿಂದ ವರಿಷ್ಠ ಪೋಲೀಸ್ ಅಧಿಕಾರಿಗಳನ್ನು ಕಳುಹಿಸಿ ತನಿಖೆ ಮಾಡಲು ಹೇಳಿದ್ದೇನೆ. ಇದು ರೈತರಿಗೆ ಸಂಬಂಧಿಸಿದ ವಿಷಯವಲ್ಲ.

ಶ್ರೀ ಹೆಚ್. ಡಿ. ದೇವೇಗೌಡ : ರೈತರಿಗೆ ಸಂಬಂಧಪಟ್ಟ ವಿಷಯವಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ರೈತರಿಗೆ ಸಂಬಂಧ ಪಡದೆ ಇದ್ದರೆ ಮಾನ್ಯ ಮಂತ್ರಿಗಳು ತೆಗೆದುಕೊಂಡಿರತಕ್ಕ ನಿರ್ಧಾರಕ್ಕೆ ನಾನು ಬೆಂಬಲ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಸತ್ಯಾಂಶಗಳನ್ನು ಅರ್ಥ ಮಾಡಿಕೊಳ್ಳಬೇಕು, ಕೆಲವು ಲೆವಿ ನೋಟೀನುಗಳನ್ನು ಸತ್ತು ಹೋಗಿರತಕ್ಕ ವ್ಯಕ್ತಿಗಳ ಹೆಸರಿನಲ್ಲಿ ಕೊಟ್ಟಿದ್ದಾರೆ. ಮರಣ ಹೊಂದಿರುವವರ ಹೆಸರಿನಲ್ಲಿ ಖಾತೆಯನ್ನು ಮುಂದು

ವರಿಸಿಕೊಂಡು ಬಂದಿರುವುದು ರೆವೆನ್ಯೂ ಅಧಿಕಾರಿಗಳ ತಪ್ಪು. ರೆವೆನ್ಯೂ ಇಲಾಖೆಯವರು ಖಾತೆಯನ್ನು ಬದಲಾವಣೆ ಮಾಡದೆ ಇರತಕ್ಕ ಸಂದರ್ಭದಲ್ಲಿ ಯಾರ ಹೆಸರಿನಲ್ಲಿ ಖಾತೆ ಇರುತ್ತದೆಯೋ ಅವರ ಹೆಸರಿನಲ್ಲಿ ಲೆವಿ ನೋಟೀಸನ್ನು ಹೊರಡಿಸಿರುತ್ತಾರೆ. ಅವರ ಹೆಸರಿನಲ್ಲಿ ಸಂಬಂಧಪಟ್ಟವರು ಲೆವಿಯನ್ನು ತುಂಬಿರಬಹುದು. ಇಂಥ ಒಂದೆರಡು ಘಟನೆಯನ್ನು ಇಟ್ಟುಕೊಂಡು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಆದ್ದರಿಂದ ದಯಮಾಡಿ ಕೂಲಂಕಷವಾಗಿ ವಿಚಾರಣೆ ಮಾಡಿ ದಿಮೊಂಡ್ ನೋಟೀಸುಗಳನ್ನು ಕೊಟ್ಟ ಮೇಲೆ, ಲೆವಿ ತುಂಬಿ ತಮ್ಮಲ್ಲಿರುವ ಹೆಚ್ಚುವರಿ ಮೊಲನ್ನು ಮಿಲ್ಲಿಗೆ ತೆಗೆದುಕೊಂಡು ಹೋದಾಗ ಅಟ್ಯಾಚ್ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ? After a detailed investigation, will the hon. Minister submit a report to this House?

ಶ್ರೀ ಕೆ. ಹೆಚ್. ಪಾಟೀಲ್: ಸಭೆಯ ಮುಂದೆ ಅದನ್ನು ಇಡಬೇಕಾದ ಅವಶ್ಯಕತೆ ಇಲ್ಲ. ಅದು ಜುಡಿಷಿಯಲ್ ಎನ್‌ಕ್ವೈರಿ ಇದೆ. ಅವರೇನಾದರೂ ತಪ್ಪು ಮಾಡಿದರೆ ಮ್ಯಾಜಿಸ್ಟ್ರೇಟರಲ್ಲಿ ಅಪೀಲ್ ಇದೆ, ಮ್ಯಾಜಿಸ್ಟ್ರೇಟರು ತಪ್ಪು ಮಾಡಿದರೆ ಹೈಕೋರ್ಟಿಗೆ ಹೋಗಬಹುದು. ಮಂತ್ರಿಯಾಗಿ ಅದರಲ್ಲಿ ನಾನು ಕೈಹಾಕುವುದರಿಂದ ಅದರಿಂದ ಸತ್ಪರಿಣಾಮವಾಗಬಹುದು ಅಥವಾ ದುಷ್ಪರಿಣಾಮವಾಗಬಹುದು ವಿಚಾರಣೆ ನಡೆಸುವವರಿಗೆ ಸ್ವಾತಂತ್ರ್ಯ ಕೊಡಬೇಕು ಎನ್ನುವುದೇ ನನ್ನ ಉದ್ದೇಶ. ಮಾನ್ಯ ಸದಸ್ಯರು ನನ್ನ ಗಮನಕ್ಕೆ ಅಧಿಕಾರಿಗಳು ಯಾವ ರೀತಿಯಲ್ಲಿ ಕಾನೂನನ್ನು ಮೀರಿದ್ದಾರೆಂದು ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇನೆ. ಎಂಥ ಉಚ್ಚ ಅಧಿಕಾರಿಯೇ ಇರಲಿ ಅವರ ಮೇಲೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಡಿ ದೇವೇಗೌಡ: ಜಿಲ್ಲಾಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆ ಮಾಡುವಾಗ ತಪ್ಪು ನಡೆದಿದ್ದರೆ ಹೈಕೋರ್ಟಿಗೆ ಹೋಗಬೇಕು ಎಂದು ಹೇಳುವುದು ರೈತರಿಗೆ ಕೊಡತಕ್ಕ ಸವಲತ್ತಲ್ಲ.

ಶ್ರೀ ಕೆ. ಹೆಚ್. ಪಾಟೀಲ್: ಮಾನ್ಯ ಸಭೆ ಕೊಟ್ಟಂಥ ಅಧಿಕಾರದನ್ವಯ ಅವರು ಕೆಲಸ ಮಾಡುತ್ತಾರೆ. ಅವರ ಆರ್ಡರ್ ಮೇಲೆ ಮ್ಯಾಜಿಸ್ಟ್ರೇಟರಲ್ಲಿ ಅಪೀಲ್ ಇದೆ.

ಶ್ರೀ ಹೆಚ್. ಡಿ. ದೇವೇಗೌಡ: ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರಿಗೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಸಸ್ಪೆನ್ ಬಂದರೆ ಯಾವುದೇ ಒಬ್ಬ ನಾಗರಿಕನನ್ನು ಅರೆಸ್ಟ್ ಮಾಡಿ 24 ಗಂಟೆಗಳ ಕಾಲ ಇಟ್ಟುಕೊಳ್ಳಬಹುದು ಎಂದು ಇದೆ.. ಆಪನಿಗೆ ಇರತಕ್ಕ ಡಿಸ್ಕ್ರಿಷನರಿ ಪವರ್ಸ್ ಸರಿಯಾಗಿ ಉಪಯೋಗ ಮಾಡದೆ

(ಶ್ರೀ ಹೆಚ್. ಡಿ ದೇವೇಗೌಡ)

ಇದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಡವೇ? If that officer has erred in exercising his discretion, then Government must pull him up.

SRI K. H. PATIL: That is why I am saying that we will go into the details of this case and if it is found that any officer has violated any provision of the *R*ules, I am prepared to take action howsoever big he may be.

ಶ್ರೀ ಹೆಚ್. ಡಿ. ದೇವೇಗೌಡ: ಈ ಒಂದು ವ್ಯವಹಾರದಲ್ಲಿ ಬಿಲ್ಲಾಧಿಕಾರಿಗಳು ಅವರಿಗೆ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಇರತಕ್ಕ ಅಧಿಕಾರವನ್ನು ಚಲಾಯಿಸತಕ್ಕ ಕಾಲದಲ್ಲಿ ಸರಿಯಾದ ರೀತಿಯಲ್ಲಿ ಚಲಾಯಿಸಿಲ್ಲ ಎನ್ನುವುದನ್ನು ಸದ್ಯಡಪಡಿಸಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಕೆ. ಹೆಚ್. ಪಾಟೀಲ್: ವಯಲೇಷನ್ ಮಾಡಿದ್ದಾರಂಬುದನ್ನು ದೃಢಪಡಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ: ಡಿಮಾಂಡ್ ನೋಟೀಸ್ ಕೊಟ್ಟು ಅದರ ಪ್ರಕಾರ ಲೆವಿ ತುಂಬಿ ತಹಸೀಲ್ದಾರರ ಮುಂದೆ ಡಿಕ್ಲರೇಷನ್ ಕೊಟ್ಟು ಬತ್ತವನ್ನು ಹಲ್ ಮಾಡಿಸುವುದಕ್ಕೆ ಹೋದಾಗ ಮತ್ತು ಆ ರೀತಿ ಬಂದ ಬತ್ತದ ಬಗ್ಗೆ ಮಿಲ್ ಮಾಲೀಕರು ಕಾನೂನು ಚೌಕಟ್ಟಿನಲ್ಲಿ ರೆವೆನ್ಯೂ ಅಧಿಕಾರಿಗಳಿಗೆ ತಿಳಿಸಿರುವಾಗ ಅವರಿಗೆ ಸಂಬಂಧಪಟ್ಟ ದವಸವನ್ನು ಸೀಜ್ ಮಾಡಿದ್ದಾರೆ. ಈ ಬಗ್ಗೆ ಸದ್ಯಡಪಡಿಸಿದರೆ, ಮಾನ್ಯ ಮಂತ್ರಿಗಳಿಗೆ ಸಮಾಧಾನವಾದರೆ ಸರ್ಕಾರ ಡೈರೆಕ್ಷನ್ ಕೊಡುವುದೇ?

ಶ್ರೀ ಕೆ. ಹೆಚ್. ಪಾಟೀಲ್: ಕಾನೂನು ಚೌಕಟ್ಟಿನಲ್ಲಿ ಕರ್ತವ್ಯವನ್ನು ಮಾಡುತ್ತಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಕಾನೂನು ಮೀರಿ ಏನಾದರೂ ಮಾಡಿದ್ದರೆ ಅಂಥದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ: ಡಿಮಾಂಡ್ ನೋಟೀಸ್ ಕೊಟ್ಟಿರುವುದು, ಲೆವಿ ತುಂಬಿರುವುದು ಎಲ್ಲವನ್ನೂ ತಂದುಕೊಡುತ್ತೇನೆ.

ಹಾನಗಲ್‌ನಲ್ಲಿರತಕ್ಕ ರೈಸ್ ಮಿಲ್ಲುಗಳೆಷ್ಟು? ಎಷ್ಟು ಮಿಲ್ಲುಗಳನ್ನು ರೈಡ್ ಮಾಡಿಸಿದ್ದಾರೆ?

SRI K. H. PATIL: I want notice. ಎಷ್ಟರ ಬಗ್ಗೆ ಇನ್ ಪರ್ಮೀಷನ್ ಬಂದಿತ್ತೊ ಅಷ್ಟನ್ನು ರೈಡ್ ಮಾಡಿರುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ: ಮಂತ್ರಿಗಳು ಅದೇ ಊರಿನಲ್ಲಿ ಕುಳಿತು ರೈಡ್ ಮಾಡಿಸಿದ್ದಾರೆ. ಯಾರಿಗೂ ಅಧಿಕಾರ ಶಾಶ್ವತವಲ್ಲ. ಅಲ್ಲಿ 18 ಮಿಲ್ಲುಗಳಿವೆ. ತಮಗೆ ಬೇಡದೆ ಇರತಕ್ಕ ಮಿಲ್ಲುಗಳನ್ನು....

SRI K. H. PATIL: I strongly object to it Madam If the Hon. member Sri Devegowda wants, let him go over to the place and find out.

2 P.M.

ಹಾನ್‌ಗಲ್ ವಿಚಾರ ನನಗೆ ತಿಳಿದಿರುವಷ್ಟು ಮಾನ್ಯ ಶ್ರೀ ದೇವೇಗೌಡರವರಿಗೆ ಗೊತ್ತಿರಲಾರದು. ನನಗೆ ಅಲ್ಲಿನ ಜನರೆಲ್ಲಾ ಬೇಕಾದವರು ಆಗಿದ್ದರೂ ಅವರು ಒಂದು ಇಂತಹ ವಿಚಾರ ತಿಳಿಸಿದಾಗ ಅವರಿಗೂ ಕೂಡ ತಿಳಿಸಿದ್ದೇನೆ. ಕಾನೂನಿನ ಚೌಕಟ್ಟಿನೊಳಗೆ ಮಾಡಬಹುದು. ಹಾಗೆ ಮಾಡುವಾಗ ಇವರು ನನ್ನ ಸಂಬಂಧದವರು ಅವರು ನನ್ನವರು ಎಂದು ಮಾಡಲಿಕ್ಕೆ ಸಾಧ್ಯವಿಲ್ಲ. ಹಿಂದೆ ಹರಿಶ್ಚಂದ್ರ ಸ್ಮಶಾನ ಕಾಯುವಾಗ ಆವನ ಮಗು ಸತ್ತು ಬಂದಾಗಲೂ ಅವನು ಯಾರಿಗೂ ಎದೆಗುಂದಲಿಲ್ಲ. ಆರೀತಿ ಇದೆ ನನ್ನ ಖಾತೆಯ ಸ್ಥಿತಿ. ನನಗೆ ಈ ಖಾತೆ ತೆಗೆದುಕೊಳ್ಳಲು ಒಪ್ಪಿಗೆ ಇಲ್ಲದೇ ಇದ್ದರೂ ಇದನ್ನು ಒತ್ತಾಯದಿಂದ ನನ್ನ ಮೇಲೆ ಹೊರಿಸಿದುದರಿಂದ ನಾನು ಇದನ್ನು ಒಪ್ಪಿಕೊಳ್ಳಬೇಕಾಯಿತು.

ಶ್ರೀ ಕೋಣಂದೂರು ಲಿಂಗಪ್ಪ: - ನಿರ್ಧಯವಾಗಿ ತಾವು ಹೇಳಿದುದಕ್ಕಾಗಿ ನಿಮಗೆ ನಾವು ಶಹಬಾಸ್‌ಗಿರಿಯನ್ನು ಕೊಡುತ್ತೇವೆ.

Sri M. B. RAMASWAMY: - I raise a point of order. I submit how it comes under the Call Attention and there is no scope for a long discussion here. If you allow all the Hon. Members, I have no objection. I am not questioning the Chair as a Member of this House, I have every right to bring it to the notice of the Chair.

ಅಧ್ಯಕ್ಷರು: This is not a point of order ಮಾನ್ಯ ಸದಸ್ಯರು ಇದನ್ನು ಅಡಜರ್ನ್‌ಮೆಂಟು ಮೋಷನ್ ಮೂಲಕ ತಂದಿದ್ದರು. ನಾನು ಇದನ್ನು ಬದಲಾವಣೆ ಮ್ಯಾಡಿ ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಾಗಿ ಪರಿವರ್ತನೆ ಮಾಡಿ ಇಲ್ಲಿ ಚರ್ಚೆಗೆ ತರಲು ಅವಕಾಶಮಾಡಿಕೊಡಬೇಕಾಯಿತು. ಅವರು ಇದರ ಬಗ್ಗೆ ಹೇಳಲು ಸ್ವಲ್ಪ ಅವಕಾಶ ಕೊಡಬೇಕೆಂದು ಕೇಳಿದರು. ಕೊಡಲು ನನಗೆ ಅಧಿಕಾರ ಇದೆ. ಅದರಂತೆ ಮಾಡುತ್ತಿದ್ದೇನೆ. ಇದರಲ್ಲಿ ಯಾವ ಪಾಯಿಂಟು ಆಫ್ ಆರ್ಡರೂ ಬರುವುದಿಲ್ಲ. ನನಗೂ ನಿಯಮಗಳು ಗೊತ್ತಿವೆ

ಶ್ರೀ ಕೆ. ಹೆಚ್. ಪಾಟೀಲ್ :—ನನಗೆ ಸುಮಾರು ಮೂನ್ನೂರು ಜನ ರೈತರು ರಜ ಹಾಕಿರುವ ಆರ್ಜಿ ಬಂದಾಗ ಅದನ್ನು ಕೂಡಲೇ ಅಧಿಕಾರಿಗಳ ಕಡೆಗೆ ಕಳುಹಿಸಿ ಇದರ ಬಗ್ಗೆ ಏಳು ದಿನಗಳೊಳಗಾಗಿ ವಿಚಾರಿಸಿ ಸರ್ಟಿಫಿಕೇಟು ಕೊಡಬೇಕೆಂದು ತಿಳಿಸಿದ್ದೆ ಎನ್‌ಕ್ವೈರಿ ಮಾಡುವಾಗ ರೈತರ ಹೆಸರಿನಲ್ಲಿ ಬೇರೆ ಯವರು ರಜ ಮಾಡಿ ಅರ್ಜಿಗಳನ್ನು ಕಳುಹಿಸಿರುವುದು ತಿಳಿದು ಬಂತು. ಇದಕ್ಕಾಗಿ ಇದನ್ನು ಪೂರ್ಣವಾಗಿ ತನಿಖೆ ಮಾಡಬೇಕೆಂದು ಇಲ್ಲಿಂದಲೇ ಪೋಲೀಸರ ಮೂಲಕ ತನಿಖೆ ಮಾಡಿ ಆದಷ್ಟು ತೀವ್ರವಾಗಿ ಮುಗಿಸಬೇಕೆಂದೂ ಸೂಚನೆ ಕೊಡ ಲಾಗಿದೆ. ಮತ್ತು ಬರುವ ಮಾರ್ಚ್ ತಿಂಗಳು ಮೊದಲನೆ ವಾರದಲ್ಲಿ ಇದರ ವಿಚಾ ರಣೆ ಡೆಪ್ಯುಟಿ ಕಮಿಷನರವರ ಮುಂದೆ ಬರುವುದರಲ್ಲಿದೆ. ಪ್ರಾಯಶಃ ಅವರು ಆಗ ಇದನ್ನು ಮುಗಿಸಬಹುದು.

ಶ್ರೀ ಹೆಚ್. ಡಿ. ದೇವೇಗೌಡ :—ಯಾವ ರೈತ ಲೆವಿ ಕೊಟ್ಟು ಉಳಿಕೆ ದವಸವನ್ನು ಮಿಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಮನೆಯಲ್ಲಿಟ್ಟಿದ್ದರೆ ಅಂತಹವನ ಮನೆಯನ್ನು ಪೋಲೀಸರು ಸೀಸ್ ಮ್ಯಾಡಿದ್ದಾರೆ. ಇದರಲ್ಲಿ ನಿಮ್ಮ ಅಧಿಕಾರಿಗಳು ಕಾನೂನನ್ನು ಉಲಂಘನೆ ಮಾಡಿದ್ದಾರೆ. I have got conceret cases.

Sri K. H. PATIL :–I agree not only in the case of Hangal, anywhere.

ಶ್ರೀ ಕೆ. ಹೆಚ್. ಪಾಟೀಲ್ :— ನಾನಾಗಲೇ ಹೇಳಿದೆ. ಕಾನೂನಿಗೆ ವಿರೋಧವಾಗಿ ಯಾವುದೇ ಅಧಿಕಾರಿ ಕೆಲಸ ಮಾಡಿದ್ದರೆ ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ :— ತಾವು ಇದನ್ನೆಲ್ಲ ಪರಿಶೀಲಿಸಿ ಸಭೆಗೆ ಎಲ್ಲ ವಿವರಗಳನ್ನೂ ತಿಳಿಸುತ್ತೀರಾ ? ಮತ್ತೊಂದು ವಿಷಯ. ಲೆವಿ ತುಂಬಿದ ಮೇಲೆ ರೈತ ತನ್ನಲ್ಲಿರುವ ಸರ್‌ಪ್ಲಸ್ ಸ್ಟಾಕನ್ನು ಬೇರೆ ಕಡೆ ಮಾರಲು ಇಲ್ಲವೆ ಮಿಲ್ಲಿಗೆ ಹೋಗಿ ಅಕ್ಕಿ ಮಾಡಿಕೊಳ್ಳಲು ಕ್ಲಿಯರೆನ್ಸ್ ಸರ್ಟಿಫಿಕೇಟು ಕೊಡಲು 14 ದಿನಗಳ ಅವಕಾಶ ಇದೆ. ಆದರೆ ಲೆವಿ ಕೊಟ್ಟು ಎರಡು ಮೂರು ತಿಂಗಳಾದರೂ ಕ್ಲಿಯರೆನ್ಸ್ ಸರ್ಟಿಫೀಕೆಟನ್ನು ಕೊಡುತ್ತಿಲ್ಲ. ಇದಕ್ಕೆ ಯಾರು ಕಾರಣರು ? ಇದರಲ್ಲಿ ಅಧಿಕಾರಿ ಗಳ ದೋಷವಿದೆಯೇ ಇಲ್ಲವೇ ರೈತರಲ್ಲಿರುವ ದೋಷಗಳೇ ? ಇದನ್ನು ಸಭೆಗೆ ತಿಳಿಸ ಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್ : –ಲೆವಿ ಕೊಟ್ಟಿದ್ದಾರೋ ಇಲ್ಲವೋ ಇದರ ಬಗ್ಗೇನೇ ಎನ್‌ಕ್ವೈರಿ ಮಾಡುತ್ತಿರುವುದು. ಇದರ ವಿವರಗಳು ನಿಖರವಾಗಿ ತಿಳಿಯ ಬೇಕಾಗಿದೆ. ಇದರ ಬಗ್ಗೆ ಕೆಲವು ರೈತರು ನನ್ನ ಕಡೆಗೆ ಬಂದು ತಿಳಿಸಿದಾಗ ಇದನ್ನು

ವಿಚಾರ ಮಾಡುವಾಗ ಕೆಲವು ದೋಷಗಳಿರುವುದು ನನ್ನ ನಜರಿಗೆ ಬಂದವು. ಇದಕ್ಕಾಗಿ ಕಾನೂನು ಪ್ರಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದೇನೆ ಲೆವಿ ಕೊಟ್ಟಿರ ವವರ ಬಗ್ಗೆ ನಾನು ಹೇಳುತ್ತಿಲ್ಲ. ಇದರ ವಿಚಾರಣೆ ನಡೆಯುತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ :— ಲೆವಿ ಕೊಟ್ಟ ಎಷ್ಟು ದಿನಗಳ ಮೇಲೆ ರೈತರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟು ಕೊಡಬೆಕೆಂದು ನಿಮ್ಮ ಕಾಯಿದೆಯಲ್ಲಿದೆ ?

ಶ್ರೀ ಕೆ. ಹೆಚ್. ಪಾಟೀಲ್ :—14 ದಿವಸಗಳೊಳಗೆ ಕೊಡಬೇಕೆಂದು ಇದೆ. ಇಲ್ಲದಿದ್ದರೆ ಅಪೀಲು ಮಾಡಿ ಕೊಳ್ಳಬಹುದು ಎಂದು ಇದೆ.

ಶ್ರೀ ಹೆಚ್. ಡಿ. ದೇವೇಗೌಡ :— ನಾನು ಇಲ್ಲಿ ಹೇಳುತ್ತಿರುವ ಕೇಸುಗಳನ್ನೇ ಹೇಳುತ್ತೇನೆ. ಲೆವಿ ತುಂಬದೆ ಇದ್ದರೆ ಅವನಿಗೆ ಹಣ ಸಿಗುವುದಿಲ್ಲ. ಆದರೆ ಇಲ್ಲಿ ರೈತರು ಲೆವಿ ತುಂಬಿ ಅವರ ಹತ್ತಿರ ಇರುವ ದವಸವನ್ನು ಮಿಲ್ಲು ಮಾಡಲು ಇಲ್ಲಿ ಬೇರೆಯವರಿಗೆ ಮಾರಲು ಹೋಗಲು ಅವನಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟು ಕೊಡಬೇಕು. ಇಲ್ಲಿರುವ ರೆವಿನ್ಯೂ ಅಧಿಕಾರಿಗಳು ಸುಮಾರು ೭-೪ ತಿಂಗಳಾದರೂ ಅವರಿಗೆ ಸರ್ಟಿಫಿಕೇಟ್ ಕೊಡದೇ ಇದ್ದರೆ ಅವರೇನು ಮಾಡಬೇಕು ? 14 ದಿನದೊಳಗೇ ಸರ್ಟಿಫಿಕೇಟ್ ಕೊಡಬೇಕೆಂದು ನಿಯಮ ನಿಮ್ಮ ಕಾನೂನಿನಲ್ಲೇ ಇದೆ. ಕಾನೂನು ಪ್ರಕಾರವೂ ನಡವಳಿಕೆ ಮಾಡದೇ ಇದ್ದರೆ ಅಂತಹ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ : ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಇದರ ಬಗ್ಗೆ ಯಾವತ್ತಿಗೂ ನಾವು ಹಿಂಜರಿಯುವುದಿಲ್ಲ ಎನ್ನುವ ಭಾವನೆಯನ್ನು ಆಗಲೇ ಕೊಟ್ಟಿದ್ದೇನೆ.

SRI H. D. DEVEGOWDA : I will give all the necessary documentary evidence possesed by me through the Hon. Speaker to the Hon. Minister.

LEVY ON RAGI CROP

ಶ್ರೀ ಬಿ. ಪುಟ್ಟಸ್ವಾಮಯ್ಯ : (ರಾಮನಗರಂ)—ಸ್ವಾಮೀ, ರೈತರಿಗೆ ಲೆವಿ ರಾಗಿ ಕೊಡಲು ಅವರಿಗೆ ರಾಗಿ ಫಸಲೇ ಸರಿಯಾಗಿ ಈ ಸಾರಿ ಆಗಲಿಲ್ಲ. ಇದರಿಂದ ಅಧಿಕಾರಿಗಳು ಹಾಗೂ ಪೋಲೀಸರು ಬಂದು ರೈತರ ಮನೆಗಳಿಗೆ ನುಗ್ಗಿ ಲೆವಿ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇದಕ್ಕಾಗಿ ಈ ಸಾಲಿನಲ್ಲಿ ರಾಗಿ ಬೆಳೆ ಆಗದೇ ಇರುವ ಕಡೆಗಳಲ್ಲಿ ಲೆವಿ ಕೊಡುವುದನ್ನು ಸರಕಾರ ಮನ್ನಾ ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು ; ತಾವು ಇದರ ಬಗ್ಗೆ ನಿನ್ನೆ ಹೇಳಿದಿರಿ. ತಮ್ಮ ನೋಟೀಸು ಸರ್ಕಾರದ ಕಡೆಗೆ ಕಳುಹಿಸಿದ್ದೇನೆ. ಸರಕಾರದಿಂದ ಉತ್ತರ ಬಂದನಂತರ ಅದನ್ನು ತೆಗೆದುಕೊಳ್ಳೋಣ.

Scarcity of drinking water in Tiptur

ಶ್ರೀ ಟಿ. ಎಂ. ಮಂಜುನಾಥ್ : ನಾನು ತಿಪಟೂರಿನಲ್ಲಿ ಕುಡಿಯುವ ನೀರಿಲ್ಲ ಎನ್ನುವುದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ಇಲ್ಲಿನ ಜನಕ್ಕೆ ನೀರಿಲ್ಲದೆ ತೊಂದರೆಯಾಗಿದೆ. ಸರಕಾರ ಇದರ ಬಗ್ಗೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ತಮ್ಮ ನೋಟೀಸು ಸರಕಾರದ ಕಡೆಗೆ ಕಳುಹಿಸಲಾಗಿದೆ. ಉತ್ತರ ಬರಲಿ.

Affairs of the Health Workers

ಶ್ರೀ ಕಾಗೋಡು ತಿಮ್ಮಪ್ಪ : ರೂಲು 312ರ ಪ್ರಕಾರ ನಾನು ಒಂದು ನೋಟೀಸನ್ನು ಹೆಲ್ತ್ ವರ್ಕರುಗಳ ಬಗ್ಗೆ ಕಳುಹಿಸಿದ್ದೆ. ಆರೋಗ್ಯ ಮಂತ್ರಿಗಳು ಇಲ್ಲಿರುವುದರಿಂದ ಇದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿ ಬಂತು. ಹೋದ ಸಾರಿ ಕೂಡ ಒಂದು ಕಮಿಟಿ ಮಾಡಿದುದನ್ನು ರದ್ದು ಮಾಡಿ ಬೇರೆ ಕಮಿಟಿ ಮಾಡಿ ಸರಿಪಡಿಸುತ್ತೇವೆಂದು ಸರಕಾರದವರು ಹೇಳಿದ್ದರು. ಸುಮಾರು ಎರಡು ಸಾವಿರ ಜನರು ಸತ್ಯಾಗ್ರಹ ಮಾಡಲು ನಿನ್ನೆ ದಿವಸ ಬಂದು ಕುಳಿತಿದ್ದರು. ಇದರ ಬಗ್ಗೆ ಸರಕಾರಕ್ಕೇನಾದರೂ ವರದಿ ಬಂತೇ ಹೇಗೆ ತಿಳಿಸುತ್ತಾರೆಯೇ ?

ಶ್ರೀ ಹೆಚ್. ಸಿದ್ದವೀರಪ್ಪ : (ಆರೋಗ್ಯ ಶಾಖೆಯ ಮಂತ್ರಿಗಳು)—ಹೆಲ್ತ್ ವರ್ಕರುಗಳು ನನ್ನ ಬಳಿಗೆ ಬಂದು ಅವರ ವಿಚಾರಗಳನ್ನು ತಿಳಿಸಿದರು. ನಾನು ಅವರಿಗೆ ಕೊಡಬೇಕಾದುದನ್ನೆಲ್ಲವನ್ನೂ ಕೊಡುತ್ತೇವೆಂದು ಹೇಳಿ ಅವರನ್ನು ಸಮಾಧಾನ ಮಾಡಿ ಕಳುಹಿಸಿದ್ದೇವೆ. ಅವರಿಗೇನು ಕೊಡಬೇಕೋ ಅದನ್ನೂ ಕೊಡಬಹುದು ಎಂದು ಹೇಳಿದ್ದೇವೆ. ಇದರಿಂದ ಅವರು ಸಮಾಧಾನಪಟ್ಟು ಕೊಂಡು ಹೋಗಿದ್ದಾರೆ

Supply of Copy of the Award on the Krishna water

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರಕ್ಕೆ ಒಂದು ವಿಷಯ ಹೇಳಬೇಕಾಗಿದೆ ; ಏನೆಂದರೆ ಕೃಷ್ಣಾ ಅವಾರ್ಡಿನ ಕಾಪಿಯನ್ನು ಈ ಸದನದ ಎಲ್ಲ ಸದಸ್ಯರಿಗೂ ಒದಗಿಸಬೇಕು. ಏಕೆಂದರೆ ಆ ಒಂದು ಅವಾರ್ಡಿನಿಂದ ನಮ್ಮ

ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ನಾವು ಹಿಂದೆಯೇ ವಿಶೇಷ ಅಧಿವೇಶನವನ್ನು ಈ ಬಗ್ಗೆ ಕರೆಯಬೇಕೆಂದು ಕೇಳಿದ್ದೆವು; ತಾವು ಆದರ ಬಗ್ಗೆ ಒಂದು ದಿವಸದ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಆದರೆ ಅದರ ಒಂದು ಚರ್ಚೆ ಯೋಗ್ಯ ರೀತಿಯಿಂದ ಮತ್ತು ಫಲಪ್ರದವಾಗಿ ನಡೆಯಬೇಕಾದರೆ ಆ ಅವಾರ್ಡಿನ ಅಂಶಗಳನ್ನು ಒಳಗೊಂಡಿರತಕ್ಕ ಪೂರ್ತಿ ವಿವರಣೆಯನ್ನು ಕೊಡ ಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

SRI H. SIDDAVEERAPPA (Minister for Health).—I shall bring it to the notice of the Chief Minister who is concerned with that issue. It is a very bulky book and the members themselves would ask for a short note on it. I understand that the Chief Minister has already assured to give a short note and it will probably be sent to all the members.

LOSS OF PADDY IN HANAGAL

ಶ್ರೀ ಕೋಣಂದೂರು ಲಿಂಗಪ್ಪ.—ಹಾನಗಲ್ಲಿನ ಸರ್ಕಾರಿ ಗೋಡೌನಿನಲ್ಲಿ 400 ಕ್ವಿಂಟಾಲ್ ಬತ್ತ ಮಾಯವಾಗಿದೆ ಎಂಬ ಸುದ್ದಿ ಹಿಂದೂ ಪತ್ರಿಕೆಯಲ್ಲಿ ವರದಿಯಾಗಿದೆ.

ಅಧ್ಯಕ್ಷರು.—ತಾವು ಆ ಬಗ್ಗೆ ನನಗೆ ಬರೆದಿದ್ದೀರಿ; ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ—ಸರ್ಕಾರೀ ಗೋಡೌನಿನಲ್ಲಿ ಕಳುವಾಗಿರು ವುದರಿಂದ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸ ಬೇಕು; ಇಂದು ಸರ್ಕಾರೀ ಗೋಡೌನ್‌ಗಳಲ್ಲಿ ಹೆಗ್ಗಣಗಳು ಪೂರ್ತಿಯಾಗಿ ತುಂಬಿಕೊಂಡಿವೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಗೋಡೌನ್‌ಗಳಲ್ಲಿ ಕೇವಲ ಚೀಲಗಳು ಮಾತ್ರ ಉಳಿಯುವ ಪರಿಸ್ಥಿತಿ ಬರಬಹುದು; ಹಾನಗಲ್ಲಿನ ಮೂಲೆ ಮೂಲೆ ಮಾನ್ಯ ಮಂತ್ರಿಗಳಿಗೆ ಗೊತ್ತಿರುವುದರಿಂದ ಅದನ್ನು ಪತ್ತೆ ಮಾಡಬೇಕು.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ ಕುಳಿತುಕೊಳ್ಳಿ

ಶ್ರೀ ಕೋಣಂದೂರು ಲಿಂಗಪ್ಪ.—ಮತ್ತೊಂದು ಮುಖ್ಯವಾದ ವಿಷಯ ವೆಂದರೆ, ಮಹಾರಾಷ್ಟ್ರ ಕೌನ್ಸಿಲ್‌ನಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಅಧ್ಯಕ್ಷರು.—ತಮ್ಮ ಹಾಗೆಯೇ ನನಗೂ ಪತ್ರಿಕೆಗಳನ್ನು ಓದುವ ಅಭ್ಯಾಸವಿದೆ. ಆ ವಿಷಯ ಇಲ್ಲಿ ಚರ್ಚೆಯಾದಾಗ ನಾನು ಇಲ್ಲಿಯೇ ಪೂರ್ತಾ ದಿವಸ ಇದ್ದೆ. ಇಲ್ಲಿಯ ಯಾವ ಸದಸ್ಯರೇ ಆಗಲೀ, ಯಾವ ಮಂತ್ರಿಗಳೇ ಆಗಲೀ ಮಹಾರಾಷ್ಟ್ರದ ಅಸೆಂಬ್ಲಿಗಾಗಲೀ, ಮಹಾರಾಷ್ಟ್ರದ ಕೌನ್ಸಿಲ್‌ಗಾಗಲೀ ಯಾವ ರೀತಿಯ ಡಿಸ್-ರೆಸ್ಪೆಕ್ಟನ್ನು ತೋರಿಸಿಲ್ಲ ; ಆದರೂ ಕೂಡ ಅಲ್ಲಿ ಏತಕ್ಕೆ ಪ್ರಸ್ತಾಪಕ್ಕೆ ಬಂತು ಎಂಬ ಬಗ್ಗೆ ನಮ್ಮ ಹತ್ತಿರ ಅಥೆಂಟಿಕ್ ರಿಪೋರ್ಟ್ ಇಲ್ಲದೇ ಕೇವಲ ಪತ್ರಿಕೆಗಳ ವರದಿಯ ಆಧಾರದ ಮೇಲೆ ಮಾತನಾಡುವುದು ಬೇಡ, ಅಲ್ಲಿಯ ಪತ್ರಿಕೆಗಳಲ್ಲಿ ಬಂದ ಸುದ್ದಿಯ ಆಧಾರದ ಮೇಲೆ ಮಾತನಾಡಿರಬಹುದೆ. ಹೊರತು ಅಥಂಟಿಕ್ ರಿಪೋರ್ಟನ್ನು ಅವರು ನಮ್ಮಿಂದ ಏನೂ ತರಿಸಿಕೊಂಡಿಲ್ಲ ; ತಮ್ಮ ಹತ್ತಿರ ಏನಾದರು ಅಥೆಂಟಿಕ್ ರಿಪೋರ್ಟ್ ಇದ್ದರೆ ಕೊಡಿ, ಅದನ್ನು ನಾನು ನೋಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಮೂಲದಿಂದ ಈ ವಿಷಯ ಅಲ್ಲಿ ಪ್ರಸ್ತಾಪಕ್ಕೆ ಬಂತು ಎಂಬ ಬಗ್ಗೆ ತಾವು ಅಲ್ಲಿಯ ದಾಖಲೆಯನ್ನು ತರಿಸಿಕೊಂಡರೆ ಅದರ ಮೂಲಕ ನಾವು ಸಮಾಧಾನ ಹೊಂದಬಹುದು ; ಮತ್ತು ನಾವು ಸಹ ಅದೇ ಕ್ರಮವನ್ನು ಅನುಸರಿಸಬಹುದು ಎಂದು ನಾನು ಹೇಳುವುದು.

ಅಧ್ಯಕ್ಷರು.—ನಾನು ಸಹ ಕೇವಲ ಪತ್ರಿಕೆಯಲ್ಲಿ ಆ ವರದಿ ಬಂದಿರುವುದನ್ನು ನೋಡಿದ್ದೇನೆ. ಅಲ್ಲಿಂದ ನನಗೆ ಅಥೆಂಟಿಕ್ ಇನ್‌ಫರ್ಮೇಷನ್ ಬರುವವರೆಗೆ ನಾವು ಆ ಬಗ್ಗೆ ಇಲ್ಲಿ ಮಾತನಾಡದಿರುವುದು ಒಳ್ಳೆಯದು.

REDUCING THE AGE OF RETIREMENT OF SCHOOL TEACHERS

ಕೋಣಂದೂರು ಲಿಂಗಪ್ಪ.—ನಾಳೆ ಮಾರ್ಚ್ ಮೊದಲನೇ ದಿವಸ ; ಸರ್ಕಾರದ ಆಜ್ಞೆಯ ಪ್ರಕಾರ ನಾಳೆಯಿಂದ ಸಾವಿರಾರು ಸರ್ಕಾರಿ ನೌಕರರು 55ನೇ ವರ್ಷಕ್ಕೆ ನಿವೃತ್ತರಾಗಬೇಕಾಗಿದೆ. ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತದೆಂದು ಎನ್. ಜಿ. ಓ. ಸಂಘದವರು ಸಹ ಮನವಿ ಮಾಡಿಕೊಂಡಿದ್ದಾರೆ. ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲಿನ ಶಿಕ್ಷಕರು ಅಂದರೆ ಮೂರನೇ ದರ್ಜೆಯ ಬಡ ನೌಕರರು ನಿವೃತ್ತರಾದರೆ ಅವರಿಗೆ ಬಹಳ ಕಷ್ಟವಾಗುತ್ತದೆ. 500 ರೂಪಾಯಿಗಳಿಗಿಂತ ಕಡಿವೆ ಸಂಬಳ ಬರುವವರ ನಿವೃತ್ತಿ ವಯಸ್ಸನ್ನು ಜಾಸ್ತಿ ಮಾಡಿ, ಅದಕ್ಕಿಂತ ಜಾಸ್ತಿ ಸಂಬಳ ಬರುವವರ ನಿವೃತ್ತಿ ವಯಸ್ಸನ್ನು ಬೇಕಾದರೆ 60 ವರ್ಷಕ್ಕೆ ಇಳಿಸಿ. ಆದರೆ ತಾವು ಈ ರೀತಿ ಮಾಡದೆ ದೊಡ್ಡದೊಡ್ಡವರಿಗೆ ಇಂದು ಬಡ್ತಿ ಕೊಡುತ್ತಿದ್ದೀರಿ. ಇದು ಸರಿಯಲ್ಲ ; ಬಡನೌಕರರ ಕಷ್ಟವನ್ನು ತಾವು ಮಾನವೀಯ ದೃಷ್ಟಿಯಿಂದ ನೋಡಬೇಕೆಂದು ಕೇಳಿಕೊಳ್ಳುತ್ತೇನೆ.